K-tech

भारतीय विज्ञान संस्थान

KSCST

ಸೈಸೆಕ್ ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ಸೈಬರ್ ಸೆಕ್ಯುರಿಟಿ ಕರ್ನಾಟಕ

CySecK Cyber Security Karnataka | K-Tech CoE for Cyber Security

# ಸೈಬರ್ ವಾರ್ತಿಕ

## ಅಕ್ಟೋಬರ್ 2022

# CYBER VARTIKA

## OCTOBER 2022

**CYBER SECURITY AWARENESS MONTH | ಸೈಬರ್ ಭದ್ರತಾ ಜಾಗೃತಿ ತಿಂಗಳು**

## ಈ ಸಂಚಿಕೆಯಲ್ಲಿ

-ಮುನ್ನುಡಿ

-ಸಂಗ್ರಹಿಸಿದ ಸುದ್ದಿ

-ಸೈಸೆಕ್ ವರದಿ

## IN THIS ISSUE

-Foreword

-Curated news

-CySecK Updates

ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ! *https://zcmp.in/BH6y*

If Cyber Vartika was forwarded to you by a friend, get it directly every month by SUBSCRIBING HERE! https://zcmp.in/BH6y

# ಮುನ್ನುಡಿ
# FOREWORD



**ವನಜಾಕ್ಷಿ.ಬಿ.ಹೆಚ್**
ಕಾರ್ಯಕ್ರಮ ವ್ಯವಸ್ಥಾಪಕರು-ಜಾಗೃತಿ ಮತ್ತು ಸಂಪರ್ಕ,
ಸೈಸೆಕ್

**Vanajakshi.B.H**
Program Manager-Awareness and Communication,
CySecK

ಇಂಟರ್‌ನೆಟ್‌ನ ಬಳಕೆ ಹೆಚ್ಚಾದಂತೆಲ್ಲಾ ಸೈಬರ್ ಭದ್ರತೆಯ ಅಪಾಯಗಳು ಗಣನೀಯವಾಗಿ ಬೆಳೆಯುತ್ತಿವೆ. The World Economic Forum ನಡೆಸಿರುವ ಸಮೀಕ್ಷೆಯಪ್ರಕಾರ ಜಾಗತಿಕ ಅಪಾಯಗಳ ಪಟ್ಟಿಯಲ್ಲಿ ಸೈಬರ್ ಭದ್ರತೆಯು 5ನೇ ಸ್ಥಾನವನ್ನು ಪಡೆದುಕೊಂಡಿದೆ. ಸೈಬರ್ ಭದ್ರತೆಯ ಅಪಾಯಗಳನ್ನು ಗಂಭೀರವಾಗಿ ಪರಿಗಣಿಸಿಅಕ್ಟೋಬರ್ ಮಾಹೆಯನ್ನು ರಾಷ್ಟ್ರೀಯ ಸೈಬರ್ ಭದ್ರತೆಯ ಜಾಗೃತಿ ಮಾಸವನ್ನಾಗಿ ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ CySecK ಅಕ್ಟೋಬರ್ ಮಾಹೆಯಲ್ಲಿ ರಾಜ್ಯದ ಎಲ್ಲಾಜನಸಾಮಾನ್ಯರಿಗೆ ಸೈಬರ್ ಅಪಾಯಗಳ ಕುರಿತು ಜಾಗೃತಿ ಮೂಡಿಸಲು October Cybersecurity Awareness Month Programme 2022 (OCAMP-22) ಕಾಯಕ್ರಮಹಮ್ಮಿಕೊಂಡಿತ್ತು.
7ನೇ ಅಕ್ಟೋಬರ್ 2022 ರಂದು ಮಾನ್ಯ ಸಚಿವರಾದ ಡಾ. ಸಿ.ಎನ್.ಅಶ್ವತ್ಥ ನಾರಾಯಣ CAMP-2022 ಕಾರ್ಯಕ್ರಮಕ್ಕೆ ಅಧಿಕೃತವಾಗಿ ಚಾಲನೆ ನೀಡಿದರು. ಬಳಿಕ SMS Campaign ಮೂಲಕ ರಾಜ್ಯದ 3ಲಕ್ಷ ಜನರಿಗೆ ಅಕ್ಟೋಬರ್ ಮಾಹೆಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಂದೇಶಗಳನ್ನು ರವಾನಿಸಲಾಯಿತು. ಆಯ್ದ ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವ ಮೂಲಕ ಅತಿ ಹೆಚ್ಚು ಜನರನ್ನು ತಲುಪುವ ಪ್ರಯತ್ನ ನಡೆಸಲಾಯಿತು. ಬಳಿಕ Dell Technologies ಸಹಯೋಗದೊಂದಿಗೆBubble Busting, Catch the Phish, Strong Password, Quiz ಹೀಗೆ ನಾಲ್ಕು ವಿವಿಧ ಬಗೆಯ ಸೈಬರ್ ಭದ್ರತೆಗೆ ಸಂಬಂಧಿಸಿದ Contest ಗಳ ಮೂಲಕ ರಾಜ್ಯದ ಜನರಿಗೆಸೈಬರ್ ಭದ್ರತೆಯ ಮಹತ್ವ ಮತ್ತು ವಿವಿಧ ಮಜಲುಗಳ ಬಗ್ಗೆ ಆಟಗಳ ಮೂಲಕ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದೆವು.
ಇನ್ನು ರಾಜ್ಯದಲ್ಲಿ ಪದವಿ ಮತ್ತು ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡು NASSCOM FutureSkill Prime ಪ್ಲಾಟ್‌ಫಾಮ್‌ನಲ್ಲಿಲಭ್ಯವಿರುವ Introduction to Cyber Security ಎಂಬ 15 ಗಂಟೆಗಳ ಕೋರ್ಸ್ ಅನ್ನು ಎಲ್ಲಾ ವಿದ್ಯಾರ್ಥಿಳಿಗೆ ಆಯೋಜಿಸಲಾಗಿದೆ. ಯಾರೆಲ್ಲಾ ಈ ಕೋರ್ಸ್ ಅನ್ನು ಅತಿಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸುತ್ತಾರೋ ಅಂತಹ ಆಯ್ದ ಮೂರು ವಿದ್ಯಾರ್ಥಿಗಳಿಗೆ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಬಹುಮಾನ ನೀಡಲಿದ್ದೇವೆ. ಇದರಜೊತೆಯಲ್ಲಿಯೇ ಅಕ್ಟೋಬರ್ ಮಾಹೆಯಲ್ಲಿನ ಎಲ್ಲಾ ದಿನಗಳು ಸೈಬರ್ ಭದ್ರತೆಯ ಮಾಹಿತಿಯನ್ನೊತ್ತ ಜಾಗೃತಿ ಪೋಸ್ಟರ್‌ಗಳನ್ನು CySecK ನ ಎಲ್ಲಾ ಸಾಮಾಜಿಕಮಾಧ್ಯಮಗಳಲ್ಲಿಯೂ ಪ್ರಕಟಿಸಲಾಯಿತು.
ಸೈಬರ್ ಭದ್ರತೆಯ ಜಾಗೃತಿ ಮಾಸಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ Contests & Course ಗಳಿಗೆ ಕ್ರಮವಾಗಿ ಮೂರು ಸಾವಿರ ಹಾಗೂ ಐದು ಸಾವಿರಕ್ಕೂ ಹೆಚ್ಚುವಿದ್ಯಾರ್ಥಿಗಳು ನೊಂದಾಯಿಸಿದ್ದಾರೆ. ಪ್ರತಿ Contests ವಿಜೇತ ನಾಲ್ಕು ಸ್ಪರ್ಧಿಗಳಿಗೆ Dell Technologies ವತಿಯಿಂದ Dell Smart Soundbar ನೀಡಲಾಯಿತು. ಇನ್ನುಕೋರ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ವಿದ್ಯಾರ್ಥಿಗಳಿಗೆ CySecK ವೆಬ್‌ಸೈಟ್‌ನಲ್ಲಿ ತಿಳಿಸಿರುವಂತೆ ಬಹುಮಾನದ ಮೊತ್ತ ವಿತರಿಸಲು ಮುಂದಾಗಿದ್ದೇವೆ.
ಇದಕ್ಕೂ ಒಂದು ಹೆಜ್ಜೆ ಮುಂದುವರೆದಿರುವ ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ಪದವಿ ಕಾಲೇಜುಗಳಲ್ಲಿ ಕಡ್ಡಾಯವಾಗಿ ಸೈಬರ್ ಸೆಕ್ಯುರಿಟಿಗೆ ಸಂಬಂಧಿಸಿದಕೋರ್ಸ್‌ಗಳನ್ನು ಸೇರಿಸಲಾಗಿದೆ. ವಿಶೇಷವಾಗಿ ರಾಜ್ಯದ ಎಲ್ಲಾ ಸರ್ಕಾರಿ ಡಿಪ್ಲೊಮಾ ಕಾಲೇಜುಗಳಲ್ಲಿ ಅಂತಿಮ ಸೆಮಿಸ್ಟರ್‌ನಲ್ಲಿ ಸೈಬರ್ ಸೆಕ್ಯುರಿಟಿಯಲ್ಲಿ ಪರಿಣತಿ ಹೊಂದಲುಅವಕಾಶ ಕಲ್ಪಿಸಲಾಗಿದೆ.
ಸೈಬರ್ ಭದ್ರತೆ ಮತ್ತು ಸೈಬರ್ ಕುರಿತ ನೈರ್ಮಲ್ಯ ಅಭ್ಯಾಸಗಳು ಎಲ್ಲಾ ಸೈಬರ್ ಡಿವೈಸ್ ಬಳಕೆದಾರರಿಗೆ ತಿಳಿದರಲೇಬೇಕಾದಂತಹ ಅತ್ಯಮೂಲ್ಯ ವಿಚಾರಗಳಾಗಿವೆ. ಇಂದಿನಯುವಪೀಳಿಗೆ ಆಮಿಷಗಳಿಗೆ ಒಳಗಾಗದೇ Think Before You Click ಎಂಬ ನಾಣ್ನುಡಿಯಂತೆ ನಡೆದುಕೊಂಡರೆ ಅದೆಷ್ಟೋ ಸೈಬರ್ ಅಪಾಯಗಳಿಂದ ದೂರವಿರಬಹುದು.

With the extensive use of internet facility the risk of cyber security has also increased significantly. According to a survey conducted by The World Economic Forum, cyber security has been ranked 5th in the list of global threats. October is recognized as National Cyber Security Awareness Month to take cyber security risks seriously. For the same reason, CySecK organized the October Cybersecurity Awareness Month Program 2022 (OCAMP-22) in the month of October to create awareness about cyber risks among all the people of the state.
Hon'ble Minister Dr. C. N. Ashwatha Narayan officially launched the CAMP-2022 program on 7th October 2022. Later, through SMS Campaign, messages were sent to 3 lakh people of the state inviting them to participate in the programs organized in the month of October. An attempt was made to reach out to maximum number of people by publishing advertisements in selected newspapers. Later, by collaborating with Dell Technologies, we tried to create awareness about the importance of cyber security to the people of the state through games like Bubble Busting, Catch the Phish, Strong Password, Quiz and four different types of cyber security related contests.
A 15-hour course called Introduction to Cyber Security, available on NASSCOM FutureSkill Prime platform, has been organized for all students of state by targeting those pursuing graduation and higher education. We will award district and state level prizes to three selected students who complete this course in the shortest possible time. Along with this, awareness posters with cyber security information were published on all social media platforms of CySecK on all days of October month.

More than 3,000 and 5,000 students have registered for the Contests & Courses organized as part of cyber security awareness campaign. All 4 winners were awarded a Dell Smart Soundbar by Dell Technologies. Now we are ready to distribute the prize money to the students who complete the course successfully as mentioned in the CySecK website.
Taking a step further, the Government of Karnataka has included compulsory courses related to cyber security in all degree colleges in the state. Specialization in cyber security is provided in the final semester in all government diploma colleges of the state.
Cyber security and cyber hygiene practices are valuable concepts that all cyber device users should be aware of. If today's youth does not succumb to temptations and acts like the proverb "Think Before You Click", then they can stay away from so many cyber dangers.

# ಪ್ರಮುಖ ಸೈಬರ್ ಸುದ್ದಿ

## ಈ 16 ಅಪಾಯಕಾರಿ ಆ್ಯಪ್‌ಗಳನ್ನು ಗೂಗಲ್ ನಿಷೇಧಿಸಿದೆ.

ಗೂಗಲ್ ಪ್ಲೇ ಸ್ಟೋರ್‌ನಿಂದ ಹಾನಿಕಾರಕ ಆಗಬಹುದಾದ 16 ಆ್ಯಪ್‌ಗಳನ್ನು ಗೂಗಲ್ ತೆಗೆದುಹಾಕಿದೆ. ಈ ಆ್ಯಪ್‌ಗಳು ಅನೇಕ ನೆಟ್‌ವರ್ಕ್ ಸಂಪನ್ಮೂಲಗಳನ್ನು ಬಳಸುವ ಜೊತೆಗೆ ಬ್ಯಾಟರಿಯನ್ನು ತ್ವರಿತವಾಗಿ ಖಾಲಿ ಮಾಡುವ ಕಾರಣದಿಂದ, ಮಾಹಿತಿ ನಷ್ಟವಾಗುತ್ತಿತ್ತು. ಆಶ್ಚರ್ಯಕರವಾಗಿ, ಪ್ಲೇ ಸ್ಟೋರ್‌ನಿಂದ ತೆಗೆದುಹಾಕುವ ಮೊದಲು, ಈ ಆ್ಯಪ್‌ಗಳು ಒಟ್ಟಾರೆಯಾಗಿ 20 ಮಿಲಿಯನ್ ಇನ್ಸ್ಟಾಲೇಶನ್ ಕಂಡಿವೆ ಎಂದು ಭದ್ರತಾ ಕಂಪನಿ ಮ್ಯಾಕ್‌ಅಫೀ ನಡೆಸಿದ ಸಂಶೋಧನೆಯಿಂದ ಬಹಿರಂಗವಾಗಿದೆ.

ಹೈ-ಸ್ಪೀಡ್ ಕ್ಯಾಮೆರಾ, ಸ್ಮಾರ್ಟ್ ಟಾಸ್ಕ್ ಮ್ಯಾನೇಜರ್, ಫ್ಲ್ಯಾಶ್‌ಲೈಟ್+, ಕ್ಯಾಲೆಂಡರ್ ನೋಟ್‌ಪ್ಯಾಡ್, ಕೆ-ಡಿಕ್ಷನರಿ, ಬುಸಾನ್‌ಬಸ್, ಜಾಯ್‌ಕೋಡ್, ಕರೆನ್ಸಿ ಕನ್ವರ್ಟರ್, ಕ್ವಿಕ್ ನೋಟ್, ಎಜ್‌ಡಿಕಾ, ಇನ್ಸ್ಟಾಗ್ರಾಮ್ ಪ್ರೊಫೈಲ್ ಡೌನ್‌ಲೋಡರ್, ಇಜ್ ನೋಟ್ಸ್, ಫ್ಲ್ಯಾಶ್‌ಲೈಟ್, ಕ್ಯಾಲ್ಕುಲೇಟರ್ ಮತ್ತು ಫ್ಲ್ಯಾಶ್‌ಲೈಟ್+ ಅನ್ನು ಹೋಲುವ ಎರಡು ಹೆಚ್ಚುವರಿ ಆ್ಯಪ್‌ಗಳು 16 ನಿಷೇಧಿತ ಆ್ಯಪ್‌ಗಳಲ್ಲಿ ಸೇರಿವೆ.




## ಆನ್‌ಲೈನ್ ವಂಚನೆ ಎಸಗಲು ನಕಲಿ ಆಧಾರ್ ಮತ್ತು ಪ್ಯಾನ್ ಪ್ರಿಂಟಿಂಗ್ ವೆಬ್‌ಸೈಟ್‌ಗಳು ಗ್ರಾಹಕರ ಮಾಹಿತಿಯನ್ನು ದುರುಪಯೋಗಪಡಿಸಿಕೊಂಡವು.

CloudSEK ಪ್ರಕಾರ, ನೂರಾರು ನಕಲಿ ಗುರುತಿನ ಚೀಟಿ ಪ್ರಿಂಟಿಂಗ್ ವೆಬ್‌ಸೈಟ್‌ಗಳು ಉತ್ತರ ಪ್ರದೇಶದಿಂದ ಕಾರ್ಯನಿರ್ವಹಿಸುತ್ತಿದ್ದು, ಗ್ರಾಹಕರ ವೈಯಕ್ತಿಕ ಮಾಹಿತಿಯನ್ನುಬಳಸಿಕೊಂಡು ವಂಚಿಸುತ್ತಿವೆ.

ಆಧಾರ್, ಪ್ಯಾನ್ ಮತ್ತು ಡ್ರೈವಿಂಗ್ ಲೈಸೆನ್ಸ್ ಸೇರಿದಂತೆ ಅಸಲಿ ಗುರುತಿನ ಚೀಟಿಗಳನ್ನು ಮಾಡಿ, ಅವುಗಳನ್ನು ಬಳಕೆದಾರರ ಮನೆ ಬಾಗಿಲಿಗೆ ಕಡಿಮೆ ಬೆಲೆಗೆ ತಲುಪಿಸುವ ಭರವಸೆಯನ್ನು ವೆಬ್‌ಸೈಟ್‌ಗಳು ನೀಡುತ್ತಿವೆ.

ದಯವಿಟ್ಟು ನೆನಪಿಡಿ: ನಿಮ್ಮ ಐಡಿ ಮಾಹಿತಿಯನ್ನು ಅಧಿಕೃತ ಸರ್ಕಾರಿ ವೆಬ್‌ಸೈಟ್‌ಗಳಲ್ಲಿ (.gov.in ಎಕ್ಸ್‌ಟೆನ್ಶನ್ ಇರುವ ವೆಬ್‌ಸೈಟ್‌ಗಳಲ್ಲಿ) ಮಾತ್ರ ನಮೂದಿಸಿ. ಇನ್ಯಾವುದೇವೆಬ್‌ಸೈಟ್‌ಗಳಲ್ಲಿ ಮಾಹಿತಿಯನ್ನು ನಮೂದಿಸುವಾಗ ಜಾಗರೂಕರಾಗಿರಿ.

## ಸಣ್ಣ ಉದ್ಯಮಗಳಲ್ಲೂ ಸೈಬರ್ ಭದ್ರತೆಯ ಆತಂಕಗಳು ಹೆಚ್ಚುತ್ತಿವೆ.

ದೇಶದಲ್ಲಿ ಸೈಬರ್ ಭದ್ರತಾ ಅಪಾಯಗಳು ಹೆಚ್ಚುತ್ತಿದ್ದು, ಸರಿಯಾದ ತಯಾರಿ ಮತ್ತು ಸಂಪನ್ಮೂಲಗಳ ಕೊರತೆಯಿಂದಾಗಿ ಸಣ್ಣ ಮತ್ತು ಮಧ್ಯಮ ಗಾತ್ರದ ಬಿಸಿನೆಸ್‌ಗಳು(ಎಸ್‌ಎಂಬಿಗಳು) ಸುಲಭ ಗುರಿಗಳಾಗಿವೆ.

ಸೈಬರ್ ಸೆಕ್ಯುರಿಟಿ ಕಂಪನಿಯಾದ ಟ್ರೆಲಿಕ್ಸ್ ಸಂಶೋಧನೆಯಿಂದ, ಕಳೆದ ಹನ್ನೆರಡು ತಿಂಗಳುಗಳಲ್ಲಿ ಭಾರತೀಯ ಎಸ್‌ಎಂಬಿಗಳು ಪ್ರತಿ ದಿನ ಸರಾಸರಿ 37 ಸೈಬರ್ ಭದ್ರತಾಲೋಪಗಳನ್ನು ಎದುರಿಸಿದ್ದು, ಇದರ ಪರಿಣಾಮವಾಗಿ 7% ಕ್ಕಿಂತಲೂ ಸ್ವಲ್ಪ ಹೆಚ್ಚಿನ ಆದಾಯ ನಷ್ಟವಾಗಿದೆ ಎಂದು ತಿಳಿದುಬಂದಿದೆ.



## ಈ ದೀಪಾವಳಿಯಂದು ಸಾಮಾಜಿಕ ಮಾಧ್ಯಮದಲ್ಲಿ ಚೈನೀಸ್ ವಿಸ್ಪರ್ ಬಗ್ಗೆ ಎಚ್ಚರವಹಿಸಬೇಕೆಂದು *CERT-In* ಹೇಳಿದೆ.



ಚೀನೀ ಡೊಮೇನ್‌ಗಳೊಂದಿಗೆ ಬೆಸೆದುಕೊಂಡ ಹೊರ ವೆಬ್‌ಸೈಟ್‌ಗಳಿಗೆ ಲಿಂಕ್ ಮಾಡಲಾದ ಸಾಮಾಜಿಕ ಮಾಧ್ಯಮಗಳಲ್ಲಿ ಹರಡುತ್ತಿರುವ ಮೋಸದ ಸಂಪರ್ಕಗಳ ಬಗ್ಗೆಎಚ್ಚರಿಕೆಯಿಂದಿರಲು CERT-In ಸಲಹೆ ನೀಡಿದೆ.

ಈ ಮೋಸದ ಸಂದೇಶಗಳನ್ನು ಸಾಮಾನ್ಯವಾಗಿ ಇನ್ಸ್ಟಾಗ್ರಾಮ್ ಮತ್ತು ವಾಟ್ಸಪ್‌ನಲ್ಲಿ ಹಂಚಿಕೊಳ್ಳಲಾಗುತ್ತದೆ. ಕದೀಮರು ವಿಶೇಷ ಹಾಲಿಡೇ ಡೀಲ್‌ಗಳ ಆಮಿಷಗಳನ್ನು ನಿರಂತರವಾಗಿ ತೋರಿಸುತ್ತ, ಜನರನ್ನು ಮರುಳು ಮಾಡುತ್ತಾರೆ. ನಕಲಿ ಚೀನೀ ವೆಬ್‌ಸೈಟ್ ಅಥವಾ ನೇರವಾಗಿ ಚೀನೀ ಸೈಬರ್ ಅಪರಾಧಿಗಳ ಕೈಗೆ ಅಜಾಗರೂಕ ಬಳಕೆದಾರರುಸಿಲುವಂತೆ ಕದೀಮರು ಹೊರ ವೆಬ್‌ಸೈಟ್‌ಗೆ ಲಿಂಕ್ ಸೇರಿಸಿರುತ್ತಾರೆ.

ದಯವಿಟ್ಟು ನೆನಪಿಡಿ: ಏನೇ ಅನುಮಾನಾಸ್ಪದವಾಗಿ ತೋರಿದರು, ತಕ್ಷಣ ಎಚ್ಚರಿಕೆ ವಹಿಸಬೇಕು. ಏಕೆಂದರೆ, "ಯಾವುದೂ ಉಚಿತವಾಗಿ ಸಿಗುವುದಿಲ್ಲ" ಎಂಬ ಮಾತುಎಂದೆಂದಿಗೂ ಸೂಕ್ತವಾಗಿದೆ.

## ಬಿಡೆನ್‌ಕ್ಯಾಶ್‌ನಿಂದ ಡಾರ್ಕ್ ವೆಬ್‌ನಲ್ಲಿ 9 ಮಿಲಿಯನ್ ಕಾರ್ಡ್‌ದಾರರ ಮಾಹಿತಿ ಸೋರಿಕೆಯಾಗಿದೆ; ಬಾಧಿತ ಬ್ಯಾಂಕ್‌ಗಳ ಪಟ್ಟಿಯಲ್ಲಿ ಎಸ್‌ಬಿಐ ಸೇರಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಮತ್ತು ಅಮೇರಿಕನ್ ಎಕ್ಸ್‌ಪ್ರೆಸ್‌ನಂತಹ ಪ್ರಮುಖ ಬ್ಯಾಂಕ್‌ಗಳ ಕ್ರೆಡಿಟ್ ಕಾರ್ಡ್ ಬಳಕೆದಾರರ ಹಣಕಾಸು ಮಾಹಿತಿಯನ್ನುಒಳಗೊಂಡಿರುವ ಮಹತ್ವದ ಡೇಟಾ ಸೋರಿಕೆಯಾಗಿದೆ ಎಂದು ಸೈಬಲ್ ಭದ್ರತಾ ತಜ್ಞರು ಕಂಡುಹಿಡಿದಿದ್ದಾರೆ.

ಸೋರಿಕೆಯಾಗಿರುವ ಡೇಟಾಬೇಸ್‌ನಲ್ಲಿ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ದಾಖಲೆಗಳು ಸೇರಿದ್ದು, ಕಾರ್ಡ್‌ದಾರರ ಹೆಸರು, ಸಂಬಂಧಪಟ್ಟ ಬ್ಯಾಂಕ್ ಹೆಸರು, ಪೂರ್ಣ ವಿಳಾಸ,ಜನ್ಮ ದಿನಾಂಕ, ಇಮೇಲ್ ವಿಳಾಸ ಮತ್ತು ಫೋನ್ ನಂಬರ್‌ಗಳೆಲ್ಲ ಸೋರಿಕೆಯಾಗಿವೆ. ಈ ವಿಷಯ ಯೂಎಸ್, ಕೆನಡಾ, ಭಾರತ, ಬಾಂಗ್ಲಾದೇಶ, ಸೌದಿ ಅರೇಬಿಯಾ,ಯುನೈಟೆಡ್ ಅರಬ್ ಎಮಿರೇಟ್ಸ್, ಇಂಡೋನೇಷ್ಯಾ, ಮಲೇಷಿಯಾ ಮತ್ತು ಸಿಂಗಾಪುರ ಸೇರಿದಂತೆ ವಿಶ್ವದಾದ್ಯಂತ ಪಾವತಿ ಕಾರ್ಡ್ ಬಳಕೆದಾರರ ಮೇಲೆ ಪರಿಣಾಮಬೀರುತ್ತದೆ.

# TOP CYBER NEWS

## Google bans these 16 risky apps

Google has removed 16 potentially harmful apps from the Play Store. The apps were rapidly depleting the battery, consuming many network resources, resulting in data loss. Interestingly, the security company McAfee research revealed that these apps had 20 million installs overall before being removed from the Play Store.

High-Speed Camera, Smart Task Manager, Flashlight+, calendar notepad, K-Dictionary, BusanBus, Joycode, Currency Converter, Quick Note, EzDica, Instagram Profile Downloader, Ez Notes, flashlight, calculator, and two additional apps that are similar to Flashlight+ are among the 16 apps that are banned.

## Fake Aadhaar and PAN printing websites utilize client information for online fraud

According to CloudSEK, hundreds of bogus identity card printing websites are operating out of Uttar Pradesh and duping consumers by utilizing their personal information.

The websites promise the creation of actual identity cards, including Aadhaar, PAN, and driving licenses, as well as their delivery to users' doorsteps at reasonable prices.

Please remember: Enter your ID data only on official government websites (sites with the .gov.in extension). Be cautious when entering it on any other sites.




## Threats to cyber security are on the rise in small businesses

Cyber security risks are on the rise in the country, and small and medium-sized businesses (SMBs) have become easy targets due to a lack of preparedness and resources.

Research by the cyber security company Trellix found that over the last twelve months, Indian SMBs saw an average of 37 cyber security incidents each day, resulting in a revenue loss of little over 7%.



## CERT-In warn netizens about the Chinese whisper on social media this Diwali



CERT-In has issued an advisory warning people to be aware of fraudulent communications circulated on social media linked to external websites with Chinese domains.

These fraudulent messages are typically shared on Instagram and WhatsApp. They frequently make claims about special holiday deals. They include a link to an external website as bait to draw the unwary user to a fake Chinese website or directly into the hands of a bunch of Chinese cyber criminals.

Please remember: If anything seems too good to be true, it should be a red flag because "there is no such thing as a free lunch," and that saying still applies in this situation.

## Data of 9 million cardholders' leaked on the dark web by BidenCash; affected banks include SBI

Security experts at Cyble have found a significant data leak involving the financial information of credit card users of major banks like the State Bank of India (SBI) and American Express.

The exposed database contains credit and debit card records, including the cardholder's name, associated bank name, complete address, date of birth, email address, and phone number. This information affects payment card users worldwide, including those in the US, Canada, India, Bangladesh, Saudi Arabia, the United Arab Emirates, Indonesia, Malaysia, and Singapore.

# ಆನ್‌ಲೈನ್ ಮೋಸಗಳು

**ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆಗೆ ಒಳಗಾದ ಸಂಸ್ಥೆಗಳಲ್ಲಿ ಬಿಗ್ ಮಿಶ್ರಾ ಪೇಡಾ ಹೊಸ ಸೇರ್ಪಡೆ.**

ಗೂಗಲ್ ಆ್ಯಡ್‌ನಲ್ಲಿ ಕಾಣಿಸಿದ ಕರ್ನಾಟಕದ ಪ್ರಸಿದ್ಧ ಸ್ವೀಟ್ ಬ್ರ್ಯಾಂಡ್ ಬಿಗ್ ಮಿಶ್ರಾ ಪೇಢಾದ ತಪ್ಪು ನಂಬರ್‌ಗೆ ಕರೆ ಮಾಡಿ, ಬೆಂಗಳೂರಿನ ಕನಿಷ್ಠ ನಾಲ್ವರುವಂಚನೆಗೊಳಗಾಗಿದ್ದಾರೆ. ಒಂದು ವಾರದೊಳಗೆ ಇಷ್ಟು ಪ್ರಕರಣಗಳು ನಡೆದಿದ್ದು, ಎಲ್ಲವು ಜಯನಗರ 4ನೇ ಬ್ಲಾಕ್‌ನಲ್ಲಿರುವ ಬಿಗ್ ಮಿಶ್ರಾ ಪೇಢಾ ಅಂಗಡಿಗೆಸಂಬಂಧಪಟ್ಟಿವೆ.

**ಮಹಾರಾಜ ಭೋಗ್ ಥಾಲಿಯನ್ನು ಫೇಸ್‌ಬುಕ್‌ನಿಂದ ಖರೀದಿಸುವಾಗ ಮಹಿಳೆಯೊಬ್ಬರು ರೂ. 8,46,000 ಕಳೆದುಕೊಂಡರು.**

54 ವರ್ಷದ ಮಹಿಳೆಯೊಬ್ಬರು ಆನ್‌ಲೈನ್ ವಂಚನೆಗೆ ಈಡಾಗಿದ್ದಾರೆ. ಆಕೆ ರೂ. 200ಗಳನ್ನು ಕಟ್ಟಿ ಮಹಾರಾಜ ಭೋಗ್ ಥಾಲಿಯನ್ನು ಫೇಸ್‌ಬುಕ್‌ನಲ್ಲಿ ಆರ್ಡರ್ ಮಾಡುವಾಗ ರೂ. 8.46 ಲಕ್ಷ ಕಳೆದುಕೊಂಡಿದ್ದಾರೆ. ಹಬ್ಬ ಮತ್ತು ಇಂಟರ್‌ನೆಟ್ ರಿಯಾಯಿತಿಯ ಉತ್ಸಾಹದ ಲಾಭ ಪಡೆದ ವಂಚಕರು, ಮಹಿಳೆಗೆ ಮೋಸ ಮಾಡಿದರು.

**1,000 ರೂಪಾಯಿ ಮೌಲ್ಯದ ದೀಪಾವಳಿ ಸಿಹಿತಿಂಡಿಗಳನ್ನು ಖರೀದಿಸುವಾಗ, 49 ವರ್ಷದ ಮುಂಬೈ ಮಹಿಳೆ 2.4 ಲಕ್ಷ ರೂಪಾಯಿ ಕಳೆದುಕೊಂಡರು.**

ಮಹಿಳೆ ಫುಡ್ ಡೆಲಿವರಿ ಆ್ಯಪ್‌ನಲ್ಲಿ ಖರೀದಿಸಿದ ಕೆಲವು ಸಿಹಿತಿಂಡಿಗಳಿಗೆ ಆನ್‌ಲೈನ್‌ನಲ್ಲಿ 1,000 ರೂಪಾಯಿ ಪಾವತಿಸಲು ಪ್ರಯತ್ನಿಸಿದರಾದರೂ, ಸ್ವೀಟ್ ಅಂಗಡಿಯಆನ್‌ಲೈನ್ ನಂಬರ್ ಡಯಲ್ ಮಾಡುವಾಗ ವಹಿವಾಟು ವಿಫಲವಾಗಿದೆ. ಇನ್ನೊಂದು ತುದಿಯಲ್ಲಿರುವ ವ್ಯಕ್ತಿ ಆಕೆಯ ಕ್ರೆಡಿಟ್ ಕಾರ್ಡ್ ಮಾಹಿತಿ ಮತ್ತು ಫೋನ್‌ಗೆ ಬಂದಒಟಿಪಿ ನೀಡಲು ವಿನಂತಿಸಿದ್ದಾರೆ. ಆಕೆಯು ಕಾರ್ಡ್ ಮಾಹಿತಿ ಮತ್ತು ಒಟಿಪಿ ನೀಡಿದ ತಕ್ಷಣವೇ, ಆಕೆಯ ಖಾತೆಯಿಂದ ರೂ. 2,40,310 ಸಂದಾಯವಾಗಿದೆ.







**ಮೈಸೂರಿನ ನಿವಾಸಿಗಳಿಗೆ ರೂ. 2.12 ಲಕ್ಷ ವಂಚಿಸಲಾಗಿದೆ.**

ನಗರದಲ್ಲಾದ ಎರಡು ಬೇರೆ-ಬೇರೆ ಪ್ರಕರಣಗಳಲ್ಲಿ ಇಬ್ಬರಿಗೆ ತಲಾ ರೂ. 2,12,980 ವಂಚನೆಯಾಗಿದೆ. ಮೊದಲ ಪ್ರಕರಣದಲ್ಲಿ, ಆನ್‌ಲೈನ್ ವಂಚಕರು 43 ವರ್ಷದ ಮಹಿಳೆಯ ಪ್ಯಾನ್ ಕಾರ್ಡ್ ಅಪ್‌ಗ್ರೇಡ್ ಮಾಡಿಕೊಡುವ ಸೋಗಿನಲ್ಲಿ ರೂ. 64,480 ವಂಚಿಸಿದ್ದಾರೆ. ಎರಡನೇಪ್ರಕರಣದಲ್ಲಿ 63 ವರ್ಷದ ವ್ಯಕ್ತಿಯೊಬ್ಬರಿಗೆ ತಮ್ಮ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಾಗಿ ಹೇಳಿ ರೂ. 1,48,500 ಮೋಸ ಮಾಡಿದ್ದಾರೆ.

**'ಲೈಂಗಿಕ ಸುಲಿಗೆ' ಪ್ರಕರಣದಲ್ಲಿ ಬಾಂದ್ರಾದ ಹಿರಿಯ ನಿವಾಸಿಯೊಬ್ಬರು ₹17.8 ಲಕ್ಷ ಕಳೆದುಕೊಂಡರು.**

ವಾಟ್ಸಪ್‌ನಲ್ಲಿ ಸಂಪರ್ಕಿಸಿದ ಮಹಿಳೆಯಿಂದ ವ್ಯಕ್ತಿಯೊಬ್ಬರು ಖಾಸಗಿ ವಿಡಿಯೋ ಕರೆ ಸ್ವೀಕರಿಸಿದ್ದಾರೆ. ಆ ಮಹಿಳೆ ವ್ಯಕ್ತಿಗೆ ತಿಳಿಯದಂತೆ ವಿಡಿಯೋ ಕರೆಯನ್ನು ರೆಕಾರ್ಡ್‌ಮಾಡಿದ್ದಾಳೆ. ವಿಡಿಯೋ ಕರೆ ಮುಗಿದ ನಂತರ, ವ್ಯಕ್ತಿಯ ಫೋನ್ ನಂಬರ್‌ಗೆ ಮತ್ತೆ ಕರೆ ಮಾಡಿದ ಮಹಿಳೆ 10,000 ಹಣ ನೀಡದಿದ್ದರೆ ಆತನ ವಿಡಿಯೋ ಅಪ್‌ಲೋಡ್ಮಾಡುವುದಾಗಿ ಹಾಗೂ ಆತನ ವಿರುದ್ಧ ಪೊಲೀಸ್‌ಗೆ ವರದಿ ಸಲ್ಲಿಸುವುದಾಗಿ ಬೆದರಿಕೆ ಹಾಕಿದ್ದಾಳೆ. ಸಂತ್ರಸ್ತ ವ್ಯಕ್ತಿಯು ಹಲವಾರು ವಹಿವಾಟುಗಳಲ್ಲಿ ಕರೆ ಮಾಡಿದವಳಬ್ಯಾಂಕ್ ಖಾತೆಗೆ ಒಟ್ಟು ₹16.50 ಲಕ್ಷ ಮತ್ತು ₹1.30 ಲಕ್ಷವನ್ನು ಜಮಾ ಮಾಡಿದ್ದಾರೆ.



**TIPS :** When you're finished using a computer or phone, make sure you're logged out of any open websites, shut down your computer properly and lock access to the phone.
ಕಂಪ್ಯೂಟರ್ ಇಲ್ಲವೇ ಫೋನ್‌ನಲ್ಲಿ ನಿಮ್ಮ ಕೆಲಸ ಮುಗಿದಾಗ, ಎಲ್ಲಾ ವೆಬ್‌ಸೈಟ್‌ಗಳಿಂದ ಲಾಗ್ ಔಟ್ ಆಗಿ, ನಿಮ್ಮ ಕಂಪ್ಯೂಟರ್ ಸರಿಯಾಗಿ ಶಟ್ ಡೌನ್ ಮಾಡಿ ಹಾಗೂ ಫೋನಿಗೆ ಪಾಸ್‌ವರ್ಡ್ ಎಂಬ ಬೀಗ ಹಾಕಿ.

# ONLINE FRAUDS

## Big Mishra Pedha latest to be hit by cyber scam

At least four people from Bengaluru have been defrauded after calling an incorrect number for Big Mishra Pedha, the well-known sweet brand from Karnataka that was advertised on Google. The incidents happened over a week and are related to their store in Jayanagar's 4th Block.

## Woman conned out of Rs. 8,46,000 when purchasing a Maharaja Bhog thali on Facebook

A 54-year-old woman fell victim to an online scam. She lost Rs. 8.46 lakh while attempting to get a Maharaja Bhog thali on Facebook for Rs. 200. The scammers tricked the woman by taking advantage of the festival and internet discount fever.

## 49-year-old Mumbai woman loses Rs 2.4 lakh while purchasing Diwali sweets worth Rs 1,000

The woman tried to pay Rs 1,000 online for some sweets she had bought on a food delivery app, but the transaction failed when dialling the online number for the sweet shop. A person on the other end of the line requested her credit card information and an OTP on her phone. After giving her card information and OTP, Rs 2,40,310 was immediately deducted from her account.







## Residents of Mysuru Cheated Of Rs. 2.12 Lakh

Two people in the city have each been defrauded of Rs. 2,12,980 in different incidences.

In the first instance, online fraudsters tricked a 43-year-old woman of Rs. 64,480 under the guise of upgrading her PAN Card. In the second instance, a 63-year-old man was defrauded of Rs. 1,48,500 under the pretext that the power to his home would be cut off.

## 'Sextortion' case costs an elderly Bandra resident ₹17.8 lakh.

A man received a private video call from a woman he contacted on WhatsApp. The woman taped the video with the man in the background. After hanging up, she called his number again and threatened to upload his video and file a police report against him if he did not give her the sum of 10,000. The victim ended up depositing a total ₹16.50 lakh and ₹1.30 lakh into the caller's bank account in several transactions.



**TIPS :** You don’t keep your vegetables and office files in the same basket. Separate your email accounts for home and work. It eliminates the risk of combining professional and personal emails and adds an extra layer of security.

ನೀವು ತರಕಾರಿ ಮತ್ತು ನಿಮ್ಮ ಆಫೀಸಿನ ಕಡತಗಳನ್ನು ಒಂದೇ ಬುಟ್ಟಿಯಲ್ಲಿ ಇಡುವುದಿಲ್ಲ ಅಲ್ಲವೇ? ಮನೆಬಳಕೆ ಮತ್ತು ಕೆಲಸಕ್ಕಾಗಿ ಬೇರೆಬೇರೆ ಇಮೇಲ್‌ಗಳನ್ನು ಬಳಸಿ. ಇದರಿಂದ ವೈಯಕ್ತಿಕ ಮತ್ತು ಕೆಲಸದ ಇಮೇಲ್‌ಗಳು ಕಲಸಿಹೋಗಿ ಗಡಿಬಿಡಿಯಾಗುವ ಅಪಾಯ ತಪ್ಪುತ್ತದೆ ಹಾಗೂ ಹೆಚ್ಚಿನ ಭದ್ರತೆ ಒದಗಿಸುತ್ತದೆ.

7



7th October- CySecK inaugurated the October Cybersecurity Awareness Campaign-22 at Vidhana Soudha, in the presence of Dr. Ashwath Narayan C N, Minister for Information Technology, Biotechnology, Science and Technology; Higher Education; Skill Development, Entrepreneurship & Livelihood – Government of Karnataka. CySecK felicitated industry partners and key supporters on the same day.

7ನೇ ಅಕ್ಟೋಬರ್- ವಿಧಾನ ಸೌಧದಲ್ಲಿ ಅಕ್ಟೋಬರ್ ಸೈಬರ್ ಸುರಕ್ಷತೆ ಜಾಗೃತಿ ಅಭಿಯಾನ-22 ಅನ್ನು ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ; ಉನ್ನತ ಶಿಕ್ಷಣ; ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಅಶ್ವಥ್ ನಾರಾಯಣ ಸಿಎನ್ ಅವರ ಉಪಸ್ಥಿತಿಯಲ್ಲಿ ಸೈಸೆಕ್ ಉದ್ಘಾಟಿಸಿತು. ಸೈಸೆಕ್ ಅಂದು ಉದ್ಯಮದ ಪಾಲುದಾರರನ್ನು ಮತ್ತು ತಮ್ಮ ಕೆಲಸಕ್ಕೆ ಒತ್ತಾಸೆಯಾಗಿ ನಿಂತ ಪ್ರಮುಖರನ್ನುಸನ್ಮಾನಿಸಿತು.

10



10th -15th October- CySecK, in collaboration with DTE, conducted a Faculty Development Program. The program was tailor-made for the lecturers of Govt Polytechnic Colleges from Karnataka. The program saw active participation of more than 60 lecturers across Karnataka. This FDP was conducted as a part of OCAMP-22.

10th -15th ಅಕ್ಟೋಬರ್- DTE ಸಹಯೋಗದೊಂದಿಗೆ ಸೈಸೆಕ್ ಫ್ಯಾಕಲ್ಟಿ ಡೆವಲಪ್‌ಮೆಂಟ್ ಕಾರ್ಯಕ್ರಮವನ್ನು ನೆರವೇರಿಸಿತು. ಈ ಕಾರ್ಯಕ್ರಮವು ಕರ್ನಾಟಕದಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರಿಗೆ ಹೇಳಿ ಮಾಡಿಸಿದಂತಿತ್ತು. ಈ ಕಾರ್ಯಕ್ರಮದಲ್ಲಿ ಕರ್ನಾಟಕದಾದ್ಯಂತ 60 ಕ್ಕೂ ಹೆಚ್ಚು ಉಪನ್ಯಾಸಕರುಹುರುಪಿನಿಂದ ಭಾಗವಹಿಸಿದರು. ಈ ಎಫ್‌ಡಿಪಿಯನ್ನು OCAMP-22 ಯ ಭಾಗವಾಗಿ ನಡೆಸಲಾಯಿತು

# CySecK Updates | ಸೈಸೆಕ್ ವರದಿ

15



15th October- CySecK, as a part of OCAMP-22, conducted a “Cybersecurity in the New Normal”- session on cybersecurity awareness at IAS Officers’ Association, Bengaluru. The speakers for the session were Mr. Karthik Rao Bappanad, Center Head, CySecK; Ms. Bhavana Kanukurthi, Associate Professor IISc, and Mr. Venkatesh Murthy, Senior Director, DSCI. More than 40 senior officials of the Government of Karnataka participated in the session.
15 ಅಕ್ಟೋಬರ್- ಸೈಸೆಕ್ OCAMP-22 ಯ ಭಾಗವಾಗಿ, ಬೆಂಗಳೂರಿನ ಐಎಎಸ್ ಅಧಿಕಾರಿಗಳ ಸಂಘದಲ್ಲಿ ಸೈಬರ್ ಸುರಕ್ಷತೆ ಜಾಗೃತಿ ಕುರಿತು "ಹೊಸ ಯುಗದಲ್ಲಿಸೈಬರ್ ಭದ್ರತೆ" - ಎಂಬ ಹೆಸರಿನ ಸಭೆ ನಡೆಸಿತು. ಸಭೆಯನ್ನು ಉದ್ದೇಶಿಸಿ ಶ್ರೀ ಕಾರ್ತಿಕ್ ರಾವ್ ಬಪ್ಪನಾಡ್, ಕೇಂದ್ರ ಮುಖ್ಯಸ್ಥರು, ಸೈಸೆಕ್; ಭಾವನಾ ಕನುಕುರ್ತಿ,ಐಐಎಸ್‌ಸಿ ಸಹ ಪ್ರಾಧ್ಯಾಪಕಿ, ಮತ್ತು ಶ್ರೀ ವೆಂಕಟೇಶ್ ಮೂರ್ತಿ, ಹಿರಿಯ ನಿರ್ದೇಶಕರು, ಡಿಎಸ್‌ಸಿಐ ಮಾತನಾಡಿದರು. ಕರ್ನಾಟಕ ಸರ್ಕಾರದ 40ಕ್ಕೂ ಹೆಚ್ಚುಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

- CySecK collaborated with Dell Technologies India on strengthening cybersecurity awareness in Karnataka. As a part of this collaboration, a set of four contests was hosted on CySecK’s website. These contests were also a part of OCAMP-22.
- ಕರ್ನಾಟಕದಲ್ಲಿ ಸೈಬರ್ ಸುರಕ್ಷತೆ ಜಾಗೃತಿಯನ್ನು ಬಲಪಡಿಸಲೆಂದು ಸೈಸೆಕ್ ಡೆಲ್ ಟೆಕ್ನಾಲಜೀಸ್ ಇಂಡಿಯಾ ಜೊತೆಗೆ ಸೇರಿಕೊಂಡಿದೆ. ಈ ಸಹಯೋಗದ ಭಾಗವಾಗಿ,ಸೈಸೆಕ್ ವೆಬ್‌ಸೈಟ್‌ನಲ್ಲಿ ನಾಲ್ಕು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಈ ಸ್ಪರ್ಧೆಗಳು OCAMP-22 ಭಾಗವಾಗಿತ್ತು.



Congratulations to the

## WINNERS OF FIRST CONTEST- "BUBBLE BURST"

- Guruprasad B. T -8123[redacted]
- vinks2293@gmail.com
- Leela Subhadra-83749[redacted]
- Adarsh. S. Nair -99643[redacted]

Congratulations to the

## WINNERS OF SECOND CONTEST- 'CATCH THE PHISH'

- Manoj kumar mondal -95319[redacted]
- S. Shweta-94741[redacted]
- 1974krishna74@gmail.com
- elmoresusanp@gmail.com


Congratulations to the
WINNERS OF THIRD CONTEST-
'STRONG PASSWORD'
nairsanjeevan99@gmail.com
mohiudinsyed9797@gmail.com
Dr. Ramakrishna Hegde- 8762[redacted]
akashinair9071@gmail.com


Congratulations to the
WINNERS OF FOURTH CONTEST-
'QUIZ'
nandeeshyr6@gmail.com
Ujwal Kundur-9741[redacted]
anuravi.k18@gmail.com
Shubham Pacharne-8669[redacted]

# Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು cybercrime.gov.in
- ತಪ್ಪು ಮಾಹಿತಿ ಗುರುತಿಸಲು -https://factcheck.ksp.gov.in
- ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**

## "See Yourself in Cyber: Together we make it Safer"



# About CySecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.